# ನೇಸರು

ತಿಂಗಳೋಲೆ

ಜನವರಿ 1990 NESARU TINGALOLE



The Mysore Association, Bombay

# ಕರ್ನಾಟಕ ಪ್ರವಾಸೀ ಆಕರ್ಷಣೆ - ಜಲಪಾತಗಳು

: ಭವಾನಿ

ಜಲಪಾತವೆಂದ ಕೂಡಲೆ ನಮ್ಮ ಮನಸ್ಸಿನಲ್ಲಿ ನೂರೆನೂರೆಯಾಗಿ ಭೋರ್ಗರೆಯುತ್ತ ಮುಗಿಲೆತ್ತರದಿಂದ ಧುಮುಕುವ ಜಲರಾಶಿಯ ಚಿತ್ರ ಮೂಡಿಬರುವುದು ಸಹಜ ಅಮೇರಿಕಾದ 'ನಯಾಗರಾ' ದಂಥ ಜಲಪಾತವು ನಮ್ಮಲ್ಲಿ ಇಲ್ಲದಿದ್ದರೂ ಅನೇಕ ಸುಂದರ ಜಲಪಾತಗಳ ತವರು ನಮ್ಮ ಕರ್ನಾಟಕ. ಇವುಗಳಲ್ಲಿ ಕೆಲವು ಈಗಾಗಲೇ ಸಾಕಷ್ಟು ಪರಿಚಿತವಾಗಿವೆ. ಹಾಗೂ ಇವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಗೊಳಿಸಲಾಗಿದೆ. ಇದರಲ್ಲಿ ಮುಖ್ಯವಾದವು ಶರಾವತಿ ಅಥವಾ ಜೋಗ ಜಲಪಾತ. ಮಾಗೋಡು ಜಲಪಾತ. ಗೋಕಾಕ ಜಲಪಾತ ಹಾಗೂ ಶಿಂಶಾ ಅಥವಾ ಶಿವಸಮುದ್ರ, ಅಥವಾ ಬ್ಲಫ್. ಇವಲ್ಲದೆ ಇನ್ನೂ ಅನೇಕ ಸಣ್ಣ ದೊಡ್ಡ ಜಲಪಾತಗಳು ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಚಿಕ್ಕಮಗಳೂರು, ಬೆಳಗಾಂವಿ, ಕೊಡಗು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ನೋಡಲು ಸಿಗುತ್ತವೆ. ಇವುಗಳ ವಿವರವನ್ನೇ ವಿವಿಧ ಮೂಲಗಳಿಂದ ಕಲೆಹಾಕಿ ಇಲ್ಲಿ ಕೊಡಲಾಗಿದೆ.

ಶರಾವತಿ ನದಿ ಸೃಷ್ಟಿಸಿರುವ ಜೋಗಜಲಪಾತ ವಿಶ್ವವಿಖ್ಯಾತವಾಗಿರುತ್ತದೆ. ಗೇರುಸೊಪ್ಪೆ ಜಲಪಾತ ಎಂದೂ ಇದಕ್ಕೆ ಹೆಸರಿದೆ. ಈ ಜಲಪಾತ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ರೈಲುನಿಲ್ದಾಣಕ್ಕೆ 16 ಕಿ.ಮೊ. ದೂರದಲ್ಲಿದೆ. ಜೋಗ ಒಂದು ಸಣ್ಣ ಹಳ್ಳಿ ಇಲ್ಲಿ ಶರಾವತಿ ನದಿ 257.7 ಮೊಟರ್ (829 ಅಡಿ) ಎತ್ತರದಿಂದ ಧುಮಕುತ್ತದೆ. ಮಳೆಗಾಲದಲ್ಲಿ ಜಲಪಾತದ ಸೊಬಗು ನೋಡಲು ರಮ್ಯ. ಇದರ ವೈಭವವನ್ನು ಕುರಿತು ಕನ್ನಡದ ಖ್ಯಾತ ಕವಿಗಳಾದ ದ.ರಾ. ಬೇಂದ್ರೆ, ಯವರು, ಡಿ.ವಿ.ಜಿ. ಯವರು ಮೈನವಿರೇಳಿಸುವಂತೆ ಹಾಡು ಕಟ್ಟಿದ್ದಾರೆ. ಇಲ್ಲಿ ತಂಗಲು ಪ್ರವಾಸೀ ಬಂಗಲೆಗಳಿವೆ. ಆದರೆ ಇಲ್ಲಿನ ಜಲವಿದ್ಯುದ್ಯೋಜನೆಯಿಂದಾಗಿ ಈಗ ಜೋಗದ ವೈಭವ ಕಡಿಮೆಯಾಗಿ ಮಳೆಗಾಲದಲ್ಲಿ ಬಿಟ್ಟು ಇನ್ನಿತರ ದಿನಗಳಲ್ಲಿ ಕೇವಲ ಪಳೆಯುಳಿಕೆಯಾಗಿ ಬಿಟ್ಟಿದೆ.

ಮಾಗೋಡು ಜಲಪಾತವು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಿಂದ 20 ಕಿ.ಮಿ. ದೂರದಲ್ಲಿರುವ ಮಾಗೋಡ ಹಳ್ಳಿಗೆ ಸಮೀಪದಲ್ಲಿದೆ. ಈ ಜಲಪಾತವನ್ನು ಶಿರಸಿಯಿಂದ ತಲಪಲು ಸಾಧ್ಯವಿದೆ. ಇಲ್ಲಿ ಬೇಡ್ತಿ ಅಥವಾ ಗಂಗಾವತಿ ನದಿಯು 60 ಮೊಟರ್ ಎತ್ತರದಿಂದ ಕೆಳಕ್ಕೆ ಹಂತ ಹಂತವಾಗಿ ಧುಮುಕಿ ಕೊಳದಂತೆ ಸೇರಿ ಅಲ್ಲಿಂದ ಮುಂದೆ 184 ಮೊಟರ್ ಆಳಕ್ಕೆ ಧುಮುಕುವುದು. ಈ ಜಲಪಾತವು ದಟ್ಟಡವಿಯ ಮಧ್ಯೆಯಿರುವುದರಿಂದ ಪ್ರವಾಸಿಗರು ನಿಜವಾದ ಸಾಹಸಿಗರಾಗಿರಬೇಕಾಗಿದೆ.

ಗೋಕಾಕ ಜಲಪಾತವು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಗೋಕಾಕ ಪಟ್ಟಣದ ವಾಯುವ್ಯಕ್ಕೆ 12 ಕಿ.ಮೊ. ದೂರದಲ್ಲಿದೆ. ಇದು ಕುದುರೆ ಲಾಳಾಕಾರದಲ್ಲಿದ್ದು 176 ಮೊಟರ್ ಅಗಲವಿರುತ್ತದೆ. ಘಟಪ್ರಭಾ ನದಿ ಇಲ್ಲಿ 52 ಮೊಟರ್ ಎತ್ತರದಿಂದ ಧುಮುಕುತ್ತದೆ. ಇದೊಂದು ಭವ್ಯನೋಟ. ಇಲ್ಲಿ ಸಮೀಪದಲ್ಲಿ ಒಂದು ತೂಗು ಸೇತುವೆ ಇದೆ. ಇದರ ಮೂಲಕ ಜಲಪಾತದ ಮೇಲ್ಭಾಗದಿಂದ ಪ್ರಪಾತದ ದೃಶ್ಯವನ್ನು ನೋಡಬಹುದು. ಮಳೆಗಾಲದಲ್ಲಿ ತುಂಬಿ ಹರಿಯುವಾಗ ಅತಿರುದ್ರವಾಗಿ ಕಾಣುವ ಜಲಪಾತ ಸಂಜೆ ಮತ್ತು ಬೆಳಗಿನ ಹೊಂಬಿಸಿಲಿನಲ್ಲಿ ಬಣ್ಣಗಳ ಬೆಡಗಿನ ಚಮತ್ಕಾರವನ್ನು ತೋರಿಸುತ್ತದೆ.

ಶಿಂಶಾ ಶಿವಸಮುದ್ರ, ಅಥವಾ ಬ್ಲಫ್ ಎಂದು ಹೆಸರಾಗಿರುವ ಇನ್ನೊಂದು ಜಲಪಾತವು ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಗಡಿಯಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಸಿಗುತ್ತದೆ. ಇಲ್ಲಿ ಕಾವೇರಿ ನದಿ ಎರಡು ಶಾಖೆಯಾಗಿ ಎರಡೂ ಶಾಖೆಗಳು 105 ಮೊಟರ್ ಎತ್ತರದಿಂದ ಧುಮುಕುತ್ತವೆ. ಇದರಲ್ಲಿ ಪಶ್ಚಿಮಶಾಖೆಯನ್ನು ಗಗನಚುಕ್ಕಿ ಎಂದೂ ಇಲ್ಲಿಂದ ಒಂದೂವರೆ ಕಿ.ಮೊ. ದೂರದಲ್ಲಿರುವ ಪೂರ್ವ ಶಾಖೆಯನ್ನು ಭರಚುಕ್ಕಿ ಎಂದೂ ಕರೆಯುತ್ತಾರೆ. ಇಲ್ಲಿ ಭಾರತದ ಪ್ರಪ್ರಥಮ ಜಲ ವಿದ್ಯುದಾಗಾರವನ್ನು ಸ್ಥಾಪಿಸಲಾಗಿದೆ. ಮೈಸೂರು ಹಾಗೂ ಸುತ್ತ ಮುತ್ತ ಪ್ರದೇಶವನ್ನು ವೀಕ್ಷಿಸಲು ಹೋಗುವ ನಿಸರ್ಗ ಪ್ರಿಯರು ಪ್ರವಾಸಿಗರು ನೋಡಲೇ ಬೇಕಾದ ಸ್ಥಳ ಶಿವಸಮುದ್ರ.


ಇನ್ನೊಂದು ಮುಖ್ಯವಾಗಿ ಹೆಸರಿಸಲಾಗುವ ಕರ್ನಾಟಕದ ಪ್ರವಾಸೋದ್ಯಮದ ನಕ್ಷೆಯಲ್ಲಿ ತೋರಿಸಲಾಗಿರುವ ಲುಷಿಂಗ್ಟನ್ ಜಲಪಾತ ಇದನ್ನು ಉಂಚಳ್ಳಿ ಜಲಪಾತ ಕೆಪ್ಪ ಜೋಗ ಎಂದೂ ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದಿಂದ ಸುಮಾರು 20 ಕಿ.ಮಿ. ದೂರದಲ್ಲಿ ಅಘನಾಶಿನಿ ನದಿ ನಿರ್ಮಿಸುವ ಈ ಜಲಪಾತಕ್ಕೆ ಶಿರಸಿಯಿಂದಲೂ ಮಾರ್ಗ ಸೌಕರ್ಯವಿದೆ. ಇಲ್ಲಿ ನೀರು 115 ಮೊಟರ್ ಎತ್ತರದಿಂದ ಭೋರ್ಗರೆಯುತ್ತ ಧುಮಕುತ್ತದೆ. ನೀರು ಪ್ರಪಾತವನ್ನು ಧುಮುಕುವ ಸಪ್ಪಳ ಕಿವಿಗಡ ಚಿಕ್ಕುವಂತಿರುವುದರಿಂಧ ಕಿವಿಕೆಪ್ಪಾದ

(ಮೂರನೇ ಪುಟಕ್ಕೆ)

ಈ ಸಂಚಿಕೆಯೊಂದಿಗೆ 'ನೇಸರು' ಎಂಟನೇಯ ವರ್ಷಕ್ಕೆ ಕಾಲಿಡುತ್ತಿದೆ. ಜನವರಿ, *1983* ರಲ್ಲಿ ಮೊದಲನೆಯ ಸಂಚಿಕೆಯನ್ನು ಹೊರತಂದಿದ್ದೆವು.

ಮೊದಮೊದಲು ಹೆಚ್ಚಾಗಿ ಅಸೋಸಿಯೇಷನ್ನಿನ ಆಗುಹೋಗುಗಳನ್ನು ವರದಿ ಮಾಡುವ ವಾರ್ತಾಪತ್ರಿಕೆಯಾಗಿದ್ದ ನೇಸರು ಕ್ರಮೇಣ ಇತರ ಅನೇಕ ವೈವಿಧ್ಯಮಯ ಹಾಗೂ ವಿಚಾರ ಪೂರ್ಣ ಲೇಖನಗಳನ್ನು ಹೊತ್ತು ತರಲಾರಂಭಿಸಿ, ಈಗ ಒಂದು ಮಾಸಪತ್ರಿಕೆಯಾಗಿ ಬೆಳೆದಿದೆ. ಈ ಬೆಳವಣಿಗೆಗೆ ಪ್ರೋತ್ಸಾಹವಿತ್ತು ಸಹಾಯ ಮಾಡಿದ ನಮ್ಮ ಸದಸ್ಯರು ಮಿತ್ರರು ಹಾಗೂ ಹಿತೈಷಿಗಳನ್ನು "ನೇಸರು" ಕೃತಜ್ಞತೆಯಿಂದ ಸ್ಮರಿಸುತ್ತದೆ. ಮತ್ತು ಮುಂಬರುವ ದಿನಗಳಲ್ಲೂ ಇದೇ ರೀತಿಯ ಸಹಾಯ ಮತ್ತು ಪ್ರೋತ್ಸಾಹ-ದಿಂದ ಇನ್ನೂ ಹೆಚ್ಚು ಬೆಳೆಯಲು ಪ್ರಯತ್ನಪಡುತ್ತದೆ.

*1990* ರ ವರ್ಷಾರಂಭದಲ್ಲಿ ಓದುಗರಿಗೆ 'ನೇಸರು' ಶುಭವನ್ನು ಕೋರುತ್ತದೆ.



ಮುಖಪುಟ ಮತ್ತು ಮೇಲಿನ ಚಿತ್ರಗಳು ಗೋಕಾಕ ಜಲಪಾತದ ದೃಶ್ಯಗಳು
ಫೋಟೋಗಳು : ಕೃಪೆ : ಅನಿಲ್ ಸಾಬಣ್ಣವರ

(2 ಡನೇ ಪುಟದಿಂದ ಬಂದುದು )

ಅನುಭವವುಂಟಾಗುತ್ತದೆ. ದಟ್ಟವಾದ ಕಾಡಿನ ಮಧ್ಯ ಅಘನಾಶಿನಿ ಭೋರ್ಗರೆಯುತ್ತ ಹಂತಹಂತವಾಗಿ ಇಳಿದು ಬಂದು ನೊರೆ-ನೊರೆಯಾಗಿ ಜಿಗಿದು ಮುಂದೆ ಒಮ್ಮೆಲೇ ಆಯತಪ್ಪಿದಂತೆ ಸುಮಾರು ನಾಲ್ಕುನೂರು ಅಡಿಕೊಳದೊಳಕ್ಕೆ ಧುಮುಕಿ ಮುಂದೆ ಸಾಗುತ್ತದೆ. ಕಲ್ಲುಹಾಸಿನ ಮೇಲೆ ಜಾರಿ ಬರುವ ಪ್ರವಾಹದ ಲಾಸ್ಯ. ನಿರಿಗೆ ಚಿಮ್ಮಿಸುವಂತೆ ಚಿಮ್ಮುತ್ತಸಾಗಿ ಬರುವ ಹಾಲಹೊಳೆಯ ಸೊಬಗು ಡಿಸೆಂಬರ್ ಮೇ ತಿಂಗಳ ವರೆಗೆ ಇನ್ನೂ ಸುಂದರ.

ಉತ್ತರ ಕನ್ನಡ ಜಿಲ್ಲೆಯ ಇನ್ನೊಂದು ರಮಣೀಯ ಜಲಪಾತ ಲಾಲ್ಗುಳಿ ಜಲಪಾತ. ಯಲ್ಲಾಪುರದಿಂದ 20 ಕಿ.ಮೀ. ಲಾಲ್ಗುಳಿ ಗ್ರಾಮವಿದೆ. ಲಾಲ್ಗುಳಿಯಿಂದ ಉತ್ತರಕ್ಕೆ ಐದಾರು ಕಿ.ಮೀ. ಕ್ರಮಿಸಿದರೆ ಕಾಳಿ ನದಿ ಪ್ರತ್ಯಕ್ಷವಾಗುತ್ತದೆ. ಅತಿರುದ್ರ ರಮಣೀಯ ಅರಣ್ಯ ದಿಂದಾವೃತ್ತವಾದ ಕಾಳಿಯು ಅನತಿದೂರದಲ್ಲಿ ಧುಮಕಿ ಇಳಿಯುತ್ತಿರುವುದು ಕಂಡು ಬರುತ್ತದೆ. ಇಲ್ಲಿ ಕಾಳಿ ನದಿ ಅನೇಕ ಹಂತಗಳಲ್ಲಿ ಒಟ್ಟು 91 ಮೀಟರ್ ಎತ್ತರದಿಂದ ಮಾಲಾಜಲಪಾತವಾಗಿ ಹತ್ತರಿಂದ ಹನ್ನೆರಡು ಅಡಿ ಅಂತರದಲ್ಲಿ ಧುಮುಕುತ್ತದೆ. ಪ್ರತಿಯೊಂದು ಜಲಪಾತದ ತಳದಲ್ಲಿ ಹೊಂಡಗಳಿವೆ. 'ಲಾಲ್ಗುಳಿ' ಜಲಪಾತವೆಂದು ಹೆಸರಾದ ಈ ಸ್ಥಳಕ್ಕೆ ಬರುವುದು ಒಂದು ದುಸ್ಸಾಹಸ ಮಾಡಿದಂತೆಯೇ ಮೇಲೆ ಸುಮಾರು 10 ಕಿ.ಮೀ. ದೂರದಲ್ಲಿ ವಿದ್ಯುಚ್ಛಕ್ತಿ ನಿರ್ಮಾಣಕ್ಕೆಂದು ತಡೆದು ನಿಲ್ಲಿಸಿರುವದರಿಂದ ಕಾಳಿನದಿ ಇಲ್ಲಿ ಸೊರಗಿದೆ. ಲಾಲ್ಗುಳಿ ಜಲಪಾತ ದಾಂಡೇಲಿಗೆ ಹತ್ತಿರವಿದ್ದು ಜಲಪಾತ ನೋಡಲು ಹೋಗುವವರು ದಾಂಡೇಲಿಯ ವನ್ಯಪ್ರಾಣಿ ಅಭಯಾರಣ್ಯವನ್ನೂ ಸಂದರ್ಶಿಸಬಹುದು.



ಜೋಗ ಜಲಪಾತದ ವೈಸಿರಿ

ಉತ್ತರ ಕನ್ನಡ ಜಿಲ್ಲೆಯಲ್ಲೇ ಇನ್ನೂ ಮೂರು ಸುಂದರವಾದ ಜಲಪಾತಗಳನ್ನು ಕಾಣಬಹುದು. ಶಿರಸಿಯಿಂದ ಮುಂದೆ ಗಣೇಶಪಾಲ ಎಂಬಲ್ಲಿಂದ ಸ್ವಲ್ಪ ದೂರದಲ್ಲಿ 'ಶಿವಗಂಗಾ' ಜಲಪಾತವಿದೆ. ಇಲ್ಲಿ ಗಣೇಶಪಾಲ ಹೊಳೆಯುನ್ನು ಸೇರಿದ ಶಾಲ್ಮಲಾ ನದಿ ಎರಡು ಹಂತದಲ್ಲಿ ಧುಮಕುತ್ತದೆ. ಎರಡು ಕವಲುಗಳಾಗಿ ಮೊದಲು 107 ಮೀಟರ್ ಧುಮಕಿ ಮತ್ತೆ ಕವಲಾಗಿ 61 ಮೀಟರ್ ಧುಮುಕುತ್ತದೆ. ಕಡಿದಾದ ಆಳಕ್ಕೆ ಬೀಳುವ ನೀರು ಇದಿರು ಬಂಡೆಗೆ ಬಡಿದು ಹನಿಗಳು ಮಂಜಿನಂತೆ ಹರಡುತ್ತವೆ. ಈ ಜಲಪಾತಕ್ಕೆ ಮೇಣಸಿ ಭಾಗದಿಂದ ಮಾತ್ರ, ಇಳಿಯಬಹುದಾಗಿದೆ. ಕೆಳಗಿಳಿದು ನೋಡಿದರೆ ಎರಡೂ ಕಡೆಯಲ್ಲಿ ಕರಿಕಲ್ಲಿನ ಗುಡ್ಡಗಳು ಗೋಡೆಗಳಂತಿದೆ. ಗಣೇಶಪಾಲದಲ್ಲಿ ಒಂದು ಆವಿರ್ಭವಿಸಿದ ಗಣೇಶಮೂರ್ತಿಯಿದ್ದು ಪ್ರತಿ ವರ್ಷ ಮಾಘ ಚೌತಿಯ ಉತ್ಸವಕ್ಕೆ ಜನಸೇರುತ್ತಾರೆ.

ಸಿದ್ಧಾಪುರದಿಂದ ದೊಡ್ಮನೆಘಟ್ಟದ ಮಾರ್ಗವಾಗಿ ಕುಮಟಾಗೆ ಹೋಗುವ ದಾರಿಯಲ್ಲಿ ಇಳಿಮಸಿ ಎಂಬಲ್ಲಿ ಬುರುಡೆ ಜೋಗ ಎಂಬ ಜಲಪಾತ ಸಿಕ್ಕುತ್ತದೆ. ಇಲ್ಲಿ ಅಘನಾಶಿನಿ ಯನ್ನು ಸೇರುವ ಆಳಿಮಸಿ ಹೊಳೆ ಮೊದಲು 200 ಅಡಿ ಕೆಳಗುರುಳಿ ನಂತರ ಎರಡು ಟಿಸಿಲಾಗಿ 150 ಅಡಿ ಕೆಳಗೆ ಆಳಕ್ಕೆ ಧುವಕುತ್ತದೆ. ಇದಲ್ಲದೆ ಯಲ್ಲಾಪುರದಿಂದ ಪಶ್ಚಿಮಕ್ಕೆ ಸಾತೊಡಿ ಎಂಬಲ್ಲಿ ಸಾತೊಡಿ ನದಿಯ ಜಲಪಾತ ಸಿಕ್ಕುತ್ತದೆ ಸಂಜೆ ಮೂರು ಘಂಟೆಗೆ ವಸಂತ ಋತುವಿನ ಮೊದಲ ದಿನಗಳಲ್ಲಿ ಸಾತೊಡಿ ನದಿ ಸೂರ್ಯನಿಗೆ ಅಭಿಮುಖವಾಗಿ ಸಪ್ತಧಾರೆಯಲ್ಲಿ ಧುಮಕುವಾಗ ಸಪ್ತವರ್ಣದ ಸಹಸ್ರ, ಸಹಸ್ರ, ಹೂಮಾಲೆಗಳು ಪ್ರವಾಹಮುಖವಾಗಿ ಮುಗಿಲಿನಿಂದ ಬೀಳುವಂತೆ ಭಾಸವಾಗುತ್ತದೆ. ಸಾತೊಡಿಯ ಸಮೀಪ ಗಣೇಶ ಗುಡಿಯಲ್ಲಿ ಒಂದು ಫಾರೆಸ್ಟ ಬಂಗ್ಲೆಯಿರುವದರಿಂದ ಪ್ರವಾಸಿಗರಿಗೆ ತಂಗಲು ಅನೂಕೂಲವಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯಿಂದ ದಕ್ಷಿಣಕ್ಕೆ ಬಂದರೆ ಹುಲಿಕಲ್. ಘಾಟಿಯ ಬಳಿ ವರಾಹಿ ನದಿಯ ಕುಂಚಿಕಲ್ಲ ಅಬ್ಬಿ ಸಿಗುತ್ತದೆ ಇಲ್ಲಿ ವರಾಹಿ ನದಿ 455 ಮೀಟರ್ ಎತ್ತರದಿಂದ ಹಂತ ಹಂತವಾಗಿ ಧುಮುಕುತ್ತದೆ. ಕಂಚಿಕಲ್ ಅಬ್ಬಿಯ ಸುತ್ತಲಿನ ಕಾಡು ದಟ್ಟವಾಗಿದೆ. ಈ ಪ್ರದೇಶದಲ್ಲಿ ಜನ ಸಂಚಾರ ವಿರಳ ಈಗ ಇಲ್ಲಿ ಒಂದು ವಿದ್ಯುದಾಗಾರ ನಿರ್ಮಾಣವಾಗುತ್ತಿರು-ವುದರಿಂದ ಜನ ಹೆಚ್ಚಾಗಿ ಓಡಾಡುವುದು ಕಂಡು ಬರುತ್ತದೆ. ಇದರಂತೆಯೇ ಶಿವಮೊಗ್ಗಾ ಜಿಲ್ಲೆ ಸೇರಿದಂತಿರುವ ಕೊಡಚಾದ್ರಿ, ಶಿಖರದಲ್ಲಿ ಹುಟ್ಟುವ ಚಕ್ರಾನದಿಗೂ ಒಂದು ಜಲಪಾತವಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಸಿಕ್ಕಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ನದಿಗೂ ಅನೇಕ ಜಲಪಾತಗಳಿವೆ. ಪಶ್ಚಿಮ ಘಟ್ಟದ ಕುದುರೆಮುಖ ಶಿಖರದಲ್ಲಿ ಇದರ ಉಗಮ. ಬಂಗಾಡಿ ಕಣಿವೆಯ ಮೂಲಕ ಹರಿದು ಬರುವ ನೇತ್ರಾವತಿ ಬೆಳತಂಗಡಿಯನ್ನು ದಾಟ ಬಂಟವಾಳದ ಮುಖಾಂತರ ಮಂಗಳೂರಕಡೆಗೆ ಸಾಗಿ ಅರಬ್ಬೀ ಸಮುದ್ರವನ್ನುಸೇರುತ್ತದೆ. ನದಿ ದಿಡುಪೆ ಗ್ರಾಮದ ಆನಡ್ಕದಲ್ಲಿ 50 ಮೀಟರ್ ಅಡಿಗಳಷ್ಟು ಕೆಳಕ್ಕೆ ಧುಮುಕಿ ಜಲಪಾತವನ್ನು ಸೃಷ್ಟಿಸುತ್ತದೆ. ದಿಡುಪೆಯಿಂದ ಮುಂದೆ ಸಾಗಿ ಕರಡಿದ್ಯಾವರದ ಹತ್ತಿರ ಭಂಡಾಜೆ ಹೊಳೆಯನ್ನು ಕೂಡಿಕೊಳ್ಳುತ್ತದೆ ಹೀಗೆ ಸಂಗಮಿಸುವ ಪೂರ್ವ ದಲ್ಲಿ ಭಂಡಾಂಜೆ ಹೊಳೆಯಲ್ಲಿ 141 ಮೀಟರಿನಷ್ಟು ಕೆಳಕ್ಕೆ ಧುಮುಕುವ ಜಲಪಾತವಿದೆ. ಈ ಜಲಪಾತಗಳಿಗೆ ಮಾರ್ಗ ಸೌಕರ್ಯದ ಅನುಕೂಲವಿಲ್ಲ.

(6ನೇ ಪುಟಕ್ಕೆ)


## IN JANUARY 1990

On 26th January 1990 - Talents Competitions for Seniors at 6-00 p.m. in

(a) Devaranama - Open to Juniors also
(b) Light Music
(c) Imprompt Speech
(d) Quiz - Open to all, entry fee Rs. 1/- per person.

Please give your entries at the Association office.

- HOUSIE
- Festival Dinner at 8-30 p.m. For members and their Guests
  Rs. 15/- for adults
  Rs. 8/- for children below 10 years.

Please do come, bring your guests. Book in advance for Dinner.



# AUGUST TRAVEL SERVICE

Agents For

इंडियन एयरलाइन्स

Indian Airlines

वायुदूत

Vayudoot

- Domestic & International Air Bookings.
- Hotel Reservations
- Coach Tours

**August Travel Service Private Limited**

Regd. Office :
3/15, Ashiana, Sector 17,
Vashi - New Bombay
Grams : AUGUSTRASERV
Phone : Vashi : 68 25 58
68 25 91

Also at :
2/16, Kabbur House,
Sion East,
Bombay - 400 022
Phone : Sion : 48 55 73
47 29 84

# IMMUNISATION

Immunisation is the process by which you confer protection to a person against certian diseases. Human body's defence system produces substances called antibodies which provide immunity against specific diseases. The antibodies are produced when the disease causing organisms are present in small quantities in the body ( at such small quantities, symptoms of infection are not seen). This principal is used in immunisation. The substance that leads to the formation of antibodies is called as antigen.

The antigen - antibody reaction is very specific. Just as a specific key can open a specific lock, a particular antibody can combine with a particular antigen and confer protection against a particular disease.

Antigens - also called a immunogens, or heptanes ( where the molecular weight is low) - provoke an immune response.

Antibodies - also known as immunolobins - are proteins with 2 functions:

1 - They bind with specific antigen

2 -They initiate secondary functions like - complement fixation
- histamine release etc.

Antibodies are produced by cells known as immunocytes. Bone marrow, spleen, and the lymphatic system are involved in providing immunity to the individual.

When an antigen enters the system,initially there is a gap of about 2 weeks before the antibodies are detected in the blood stream. This period of 2 weeks is full of intense activity in the peak level in this primary stage. However, if after an interval, a booster dose of the antigens is given, then the immuno system very rapidly produces a response of reaching peak level within a day. This second degree response is maintained at high level, falling slowly over a period of months. The antibodies formed primarily in the system have a good memory and months/ years later if there is a secondary stimulus, they respond by producing peak antibody levels rapidly. This phenomenon helps us in developing agents for immmunisation against various common diseases.

All of us know of vaccination. The word vaccine is from the Latin, 'Vacca' meaning a Cow. Vaccine which was originally used to immunise against small pox was derived from calves innoculated with diluted dose of Cowpox germs. Now, with the advancement of technology, improved and more specific antigens are available. By suitable treatment of the vaccine such as absorbing an mineral gels, emulcifying with mineral oil etc. its Potency can be increased. Dead or weakened germs or their toxoids or soluble extracts, also confer in immunity.

Depending upon the nature of the antigen, the duration of immunity confered varies. For example the toxoids such as Diptheria antitoxion, tetanustoxoid confer short term protection.

During pregancy, many of the antibodies in the mother pass on to the child and thus confer the child protection. Mothers milk also helps the child in acquiring certain antibodies. As the child grows it is immunised against some of the diseases such as Small pox, Diptheria, Tetanus, whooping cough, Polio etc. It is important that the booster doses, wherev necessary, are given as per schedule so that the immunity is effectively developed in the child.

## ಓದುಗರಿಂದ ಓಲೆ

ನಮಸ್ಕಾರ,

ನವೆಂಬರ್ ತಿಂಗಳ ಮಕ್ಕಳ ವಿಶೇಷಾಂಕವಾಗಿ ಹೊರಬಂದ "ನೇಸರು" ನೋಡಿದಾಕ್ಷಣ ಹಾಗೇ ಇರಲಾಗಲಿಲ್ಲ, ಅದಕ್ಕಾಗಿ ಬರೆಯುತ್ತಿದ್ದೇನೆ. ಸಂಚಿಕೆಯಲ್ಲಿನ ಲೇಖನಗಳಲ್ಲಿ ತುಂಬ ವೈವಿಧ್ಯವಿದೆ. ಅದು ಇರಬೇಕೆಂದು ಬಯಸುವುದು ಸಂಪಾದಕರ ಕಳಕಳಿಯೂ ಆಶೆಯೂ ಸಹಜ. ಆದರೆ ಆ ವೈವಿಧ್ಯವನ್ನು "ತಿಂಗಳೋಲೆ" ಯಲ್ಲಿ ತುಂಬಿ ಕೊಟ್ಟ ಮಕ್ಕಳೆಲ್ಲರೂ ನಿಜಕ್ಕೂ ಅಭಿನಂದನಾರ್ಹರು.

ಇಲ್ಲಿ ಗಂಭೀರ, ಪ್ರಸ್ತುತ, ಹಾಸ್ಯ, ವಿಷಯಜ್ಞಾನ ವಿಶೇಷವಾಗಿ ಆಶುಚಿತ್ರ, ಸ್ಪರ್ಧೆಗಳನ್ನೊಳಗೊಂಡು ಮಕ್ಕಳು ತಾವು ಕಾಣುವ ಸುತ್ತಮುತ್ತಲಿನ ಘಟನೆಗಳಿಗೆ ಹೆಸರು ನೀಡಿದ್ದಾರೆ. ಉಸಿರು, ನೀಡಿದ್ದಾರೆ. ಬಹುಶಃ ಇಂಥ ಮಕ್ಕಳೇ ಹತ್ತರಲ್ಲಿ ಹನ್ನೊಂದಾಗಿ ಹೋಗದೆ ತಮ್ಮ ಸ್ವಂತಿಕೆಯನ್ನೂ ಉಳಿಸಿಕೊಳ್ಳಬಲ್ಲರು.

DRUG ABUSE IN STUDENTS ಒಂದು ಬಹು ಗಂಭೀರವಾದ ವಿಷಯ ಕುರಿತ ನಿಷ್ಠ ಬರಹ ಹೆಚ್ಚು ಹೆಚ್ಚು ಮಕ್ಕಳು ಓದಿ ತಿಳಿಸಿಹೇಳಬೇಕು. ನಮ್ಮ ಕ್ಲಾಸಿನಲ್ಲಿ ಇದನ್ನು ಓದಿ ಹೇಳಿದ್ದೆನೆ. ! The Greenhouse Effect ಸಹ ಗಂಭೀರವಾದ ಪ್ರಸ್ತುತ ವಿಷಯ. ಧಿಡೀರ್ ನಗರೀಕರಣದಿಂದಾಗಿ ಒಝೋನ್ ವಲಯದಲ್ಲಿ ರಂಧ್ರಗಳುಂಟಾದನ್ನು ವಿಜ್ಞಾನಿಗಳು ಗುರಿತಿಸಿದುದನ್ನು, ಅದರ ಗಂಡಾಂತರ ತಡೆಯುವ ಸೂಚನೆಯನ್ನು ಚೊಕ್ಕದಾಗಿ ನಿರೂಪಿಸಲಾಗಿದೆ.

Sports in india ಇಂದಿನ ನಮ್ಮ ಅಳುಬರುಕ ಆಟಗಾರರನ್ನು ಕುರಿತ ಚಿತ್ರ, ! My Ambition ತಾನು ಒಳ್ಳೆಯ ಆಟಗಾರನಾಗಿ ಚಿನ್ನದ ಪದಕ ತರುವ ಬಯಕೆಯ ಹುಡುಗ ಈಗಿನಿಂದ ಆಟದ ಬಯಲನ್ನೇ ಹೆಚ್ಚು ಪ್ರೀತಿಸಬೇಕಾಗುವದೇನೋ !

Autobiography of Masic ಮುಖವಾಡದ ಸುತ್ತ ಹೆಣೆದ ಸುಂದರ ಬಾಲಕನ ಕಲ್ಪನೆ ಸರಿಯಾಗಿ ಮಾಡಿದ್ದರೆ, Amazing Facts, Did you know ? Sherlock Homes - ಇವುಗಳಲ್ಲಿ ಸ್ವಲ್ಪ ಮಾಹಿತಿಗಳು ದೊರೆಯುತ್ತವೆ Laughter ನ ಎರಡನೇ ಹಾಸ್ಯ ಹೆಚ್ಚು ಸುಂದರ.

ಮಿನಿ ಕಥೆಪೂರ್ಣವಾಗಿ ಬಂದಿದೆ. ಬಡವನ ಬುದ್ಧಿವಂತಿಕೆ, ಪ್ರೊಫೆಸರ್‌ನ ಮೂರ್ಖತನ ಕಾಗೆಯ ಧಡ್ಡತನ, ಸ್ವಚ್ಛತೆಯ ಮಹತ್ವ ಅಲ್ಲದೆ ಮಿನಿಕವಿತೆಯೂ ಹೆಸರಿಗೆ ತಕ್ಕಂತೆ Believe it or not ಯೇ ಆಗಿದೆ.

ಎಂಟೂ ಚಿತ್ರಗಳು ಸೊಗಸಾಗಿ ಮೂಡಿವೆ. ಇವುಗಳಲ್ಲಿ ಮಕ್ಕಳ ಮನದಲ್ಲಿರುವ ನಿಸರ್ಗ ಪ್ರೀತಿ ಸೊಗಸಾದುದನ್ನು ನೆನಪಿಡುವ ರೀತಿ ಅಭಿವ್ಯಕ್ತವಾಗಿದೆ. ಮುಖಪುಟದ ಚಿತ್ರಕಾರ ಹೆಚ್ಚು ಶ್ರಮ ತೆಗೆದುಕೊಂಡಿದ್ದಾರೆ.

ಒಟ್ಟಿನಲ್ಲಿ ತಿಂಗಳ ತಿಂಗಳೋಲೆಯನ್ನು ಲವಲವಿಕೆಯಿಂದಿಟ್ಟ ಚಿರಂಜೀವಿಗಳಿಗೂ ಮತ್ತು ಸಂಪಾದಕರಾದ ನಿಮಗೂ ನನ್ನ ನಮಸ್ಕಾರಗಳು.

ಇಷ್ಟೊಂದು ದೀರ್ಘವಾದ ಪತ್ರವನ್ನು ಬರೆಯಲು ಹಚ್ಚಿದ ಮಕ್ಕಳೆಲ್ಲ, ನೀವು ಹೇಳಿದಂತೆ, ಬೇಗ ಬೇಗ ಇದನ್ನು (ಕನ್ನಡವನ್ನು) ಓದಲು ಬರೆಯಲು ಕಲಿಯಲೆಂದು ಹಾರೈಸುತ್ತೇನೆ.

ಪ್ರೋ.ಬಿ.ಬಿ.ಪೂಜಾರಿ,
ಸಂಗಮೇಶ್ವರ ಕಾಲೇಜ,
ಸೊಲ್ಲಾಪುರ - 413 001

# ಅಸೋಸಿಯೇಷನ್ನಿನಲ್ಲಿ



9 ವರ್ಷಕ್ಕೆ ಮೇಲ್ಪಟ್ಟ ಮಕ್ಕಳು ಮೂರು ಕಾಲಿನ ಸ್ಪರ್ಧೆಯಲ್ಲಿ ಕಾಲುಕಟ್ಟಿಕೊಂಡು ಓಡುತ್ತಿರುವದು.



ವಾರ್ಷಿಕ ಕ್ರೀಡಾಕೂಟದಲ್ಲಿ 6 ವರ್ಷದೊಳಗಿನ ಮಕ್ಕಳು ಬಿಸ್ಕೀಟ್ ತಿನ್ನುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದು

## 1989 ರ ಪ್ರತಿಭಾ ಸ್ಪರ್ಧೆ ಮತ್ತು ಕ್ರೀಡಾಕೂಟ

ಪ್ರತಿವರ್ಷ ನಡೆಯುವಂತೆ ಈ ವರ್ಷವೂ ಡಿಸೆಂಬರ್ 24 ಮತ್ತು 25 ರಂದು ಕ್ರೀಡಾ ಕೂಟವನ್ನು ಏರ್ಪಡಿಸಲಾಗಿತ್ತು.

ಡಿಸೆಂಬರ್ 24 ರಂದು ಸುಮಾರು ಅಪರಾಹ್ನ 3-00 ಘಂಟೆಗೆ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯಿಂದ ಆರಂಭವಾದ ಪ್ರತಿಭಾಸ್ಪರ್ಧೆಯು ಸಂಜೆ ಸುಮಾರು 8-30 ರವರೆಗೆ ನಡೆಯಿತು. ಈ ಚಿತ್ರಕಲೆಯ ಸ್ಪರ್ಧೆಯಲ್ಲಿ 16 ಮಕ್ಕಳು ಭಾಗವಹಿಸಿದ್ದರು. ನಂತರದ ಕಾರ್ಯಕ್ರಮ ಮಕ್ಕಳಿಂದ ಫ್ಯಾನ್ಸಿಡ್ರೆಸ್, ಹಾಡುಗಾರಿಕೆ, ಭಾಷಣಗಳನ್ನೊಳಗೊಂಡಿದ್ದವು. ಎಲ್ಲ ಕಾರ್ಯ-ಕ್ರಮಗಳಲ್ಲಿ 4 ವರ್ಷದಿಂದ 14 ವರ್ಷದೊಳಗಿನ ಮಕ್ಕಳು ಸ್ಪರ್ಧಿಸಿದ್ದರು. ಕಾರ್ಯಕ್ರಮವನ್ನು



ವಿವಿಧ ವೇಷ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ 'ಜಾಪಾನಿ ಬೊಂಬೆ'

ಶ್ರೀಮತಿ ಲಲಿತಾ ಬಾಲು ನಡೆಸಿಕೊಟ್ಟರು. ಶ್ರೀಯುತ ಎ.ಎಸ್.ಕೆ.ರಾವ್, ಶ್ರೀಮತಿ ಇಂದಿರಾ ಶಂಕರ್ ಹಾಗೂ ಶ್ರೀಮತಿ ಲೀಲಾ ತೀರ್ಪುಗಾರರಾಗಿದ್ದರು.

ಡಿಸೆಂಬರ್ 25 ರಂದು ಕ್ರೀಡಾಕೂಟದಲ್ಲಿ ಮಕ್ಕಳು ಯುವಕರು ಹಾಗೂ ವಯಸ್ಕರು ಭಾಗವಹಿಸಿದ್ದರು. ಮಕ್ಕಳಿಗೆ ವೇಗದ ಓಟ, ಮೂರುಕಾಲಿನ ಓಟ, ಗೋಲಿ-ಚಮಚ, ಚೆಂಡು ಎಸೆತ, ಪೊಟ್ಯಾಟೋ ರೇಸ್, ಏಮ್ಮಿಂಗ್ ದಿ ವಿಕೆಟ್ ಇತ್ಯಾದಿ ಸ್ಪರ್ಧೆಗಳಿದ್ದವು. ಗಂಡಸರು ಮತ್ತು ಹೆಂಗಸರು ಶಾಟ್‌ಪುಟ್ ಎಸೆತ, ಬಾಸ್ಕೆಟ್ ಬಾಲ್ ಎಸೆತ, ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಹಲವಾರು ಜನರು ಬಂದು ನಡೆಸಿಕೊಟ್ಟರು. ಮ್ಯೂಸಿಕಲ್ ಚೇರ್‌ನಿಂದ ಕಾರ್ಯಕ್ರಮ ಕೊನೆಗೊಂಡಿತು.



ಮಹಿಳೆಯರ 'ಶಾಟ್ ಪುಟ್' ಎಸೆತ.



ಪುರುಷರ 'ಶಾಟ್ ಪುಟ್' ಎಸೆತ.

(3 ನೇ ಪುಟದಿಂದ ಬಂದುದು )

ಸುಲಭವಾಗಿ ಪ್ರಯಾಣಿಸಲು ಅನುಕೂಲವಿರುವ ಹಾಗೂ ಇತರ ಸ್ಥಳ ವೀಕ್ಷಣೀಯ ಜೊತೆಯಲ್ಲಿ ಬರುವಂಥಹ ಜಲಪಾತಗಳು ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಸಿಗುತ್ತವೆ. ಇದರಲ್ಲಿ ಮಾಣಿಕ್ಯಧಾರಾ ಜಲಪಾತವು ಬಾಬಾ ಬುಡನ್‌ಗಿರಿಗೆ 3.2 ಕಿ.ಮೀ ದೂರದಲ್ಲಿ ಇಲ್ಲಿ ನೀರು 50 ಅಡಿಗಳ ಎತ್ತರದಿಂದ ಹನಿಹನಿಯಾಗಿ ಬೀಳುವಾಗ ದಪ್ಪ ದಪ್ಪ ಮಾಣಿಕ್ಯ ಗಳು ಮಾಲೆಯಂತೆ ಉದುರುವ ಭಾವನೆಯಾಗುತ್ತದೆ. ಇಲ್ಲಿತುಂತುರು ನೀರಿನ ಸ್ನಾನ ಮಾಡುವುದು ಆನಂದದ ಅನುಭವ.

ಚಿಕ್ಕಮಗಳೂರು ತರೀಕೆರೆಯಿಂದ ಕೆಮ್ಮಣ್ಣು ಗುಂಡಿಗೆ ಹೋಗುವ ದಾರಿಯಲ್ಲಿ ಕೆಮ್ಮಣ್ಣು ಗುಂಡಿ ಬೆಟ್ಟದ ಬುಡದಲ್ಲಿ ಕಾಳಹಸ್ತಿ ಜಲಪಾತ ವಿದೆ. ಇಲ್ಲಿ ನೀರು ಬೀಳುವ ಎತ್ತರ 150 ಅಡಿಗಳು. ಕೆಮ್ಮಣ್ಣುಗುಂಡಿಗೆ ವಿಹಾರಾರ್ಥವಾಗಿ ಹೋಗುವವರು ಸುಲಭವಾಗಿ ಕಾಳಹಸ್ತಿ ಜಲಪಾತವನ್ನು ನೋಡಿ ಆನಂದಿಸಿ ಬರಬಹುದು. ಕೆಮ್ಮಣ್ಣು ಗುಂಡಿಯಿಂದ ಸುಮಾರು 9 ಕಿ.ಮೀ. ದೂರದಲ್ಲಿ ಇನ್ನೊಂದು ಜಲಪಾತವಿದ್ದು ಇದನ್ನು ಹೆಬ್ಬೆ ಎನ್ನುತ್ತಾರೆ. ನೀರು ಬೀಳುವ ಎತ್ತರ 250 ಅಡಿಗಳು ಜಲಪಾತದಲ್ಲಿ ಎರಡು ವಿಭಾಗಗಳಿದ್ದು ಒಂದನ್ನು ದೊಡ್ಡ ಹೆಬ್ಬೆ ಎಂದೂ ಮತ್ತೊಂದನ್ನು ಚಿಕ್ಕ ಹೆಬ್ಬೆ ಎಂದೂ ಹೇಳುತ್ತಾರೆ. ಹೆಬ್ಬೆ ಜಲಪಾತದ ಸುತ್ತ ಕಡಿದಾದ ಬೆಟ್ಟ, ಬೆಟ್ಟದ ಇಳಿಜಾರಿನ ಕಾಡು, ಗಿಡಮರಗಳು ಒಳ್ಳೆಯ ದೃಶ್ಯಾವಗಳನ್ನೊ-ದಗಿಸುತ್ತದೆ.

ಚಿಕ್ಕಮಗಳೂರಿನಿಂದ ದಕ್ಷಿಣಕ್ಕೆ ಕರ್ನಾಟಕ ದಕ್ಷಿಣಗಡಿ ಕೊಡಗು ಜಿಲ್ಲೆಯಲ್ಲೂ ಮೂರು ನಾಲ್ಕು ಜಲಪಾತಗಳು ಕಾಣಸಿಗುತ್ತವೆ. ಇದರಲ್ಲಿ ಹಾರಂಗಿಯ ಬಳಿಯಿರುವ ಅಬ್ಬಿಯ ಬಗ್ಗೆ ಈಗಾಗಲೇ ಡಿಸೆಂಬರ್ 89 ರ ನೇಸರುವಿನಲ್ಲಿ ಓದಿರುವಿರಿ ಇನ್ನೊಂದು ಜಲಪಾತ ವಿರಾಜಪೇಟೆ ತಾಲ್ಲೂಕಿನ ಇರ್ಪುವಿನ ಬಳಿ ಲಕ್ಷ್ಮಣತೀರ್ಥ ನದಿಯ ಧುಮುಕುವಿಕೆಯಿಂದ ಉಂಟಾಗಿರುತ್ತದೆ. ಇಲ್ಲಿ ನದಿ 200 ಅಡಿ ಎತ್ತರದಿಂದ ಧುಮುಕುತ್ತದೆ. ಇನ್ನೊಂದು ಜಲಪಾತ ಸಾತರ್ ಹೊಳೆಯು ವಿರಾಜಪೇಟೆಯ ಬಟೆಂಗಲಿ ಗ್ರಾಮದ ಬಳಿ ಕಾಟಿಗುಂಡಿಯ ಹತ್ತಿರ 434 ಅಡಿ ಎತ್ತರದಿಂದ ಧುಮುಕುವ 'ಸಾತರ್ ಅಬ್ಬಿ' ಇದನ್ನು ನೋಡಲು ಬರುವ ಪ್ರವಾಸಿಗರಿಗೆ ಯಾವ ವ್ಯವಸ್ಥೆಯೂ ಇಲ್ಲ. ಯಾರಾದರೂ ಬಂಧುಗಳು ಸ್ನೇಹಿತರು ಈ ಪ್ರದೇಶದಲ್ಲಿ ವಾಸವಾಗಿದ್ದರೆ ಅವರ ಸಹಕಾರದಿಂದ 'ಸಾರತ್ ಅಬ್ಬಿ' ಯನ್ನು ನೋಡಿಬರಬಹುದು.

ಕೊಡಗಿನಲ್ಲಿ ಹುಟ್ಟುವ ಕಾವೇರಿ ಮೈಸೂರು ಜಿಲ್ಲೆಯನ್ನು ಕೃಷ್ಣರಾಜನಗರ ತಾಲ್ಲೂಕಿನ ಅಬ್ಬೂರು ಗ್ರಾಮದ ಬಳಿ ಪ್ರವೇಶಿಸುತ್ತದೆ. ಅದೇ ತಾಲ್ಲೂಕಿನ ಚುಂಬನಕಟ್ಟೆ ಎಂಬಲ್ಲಿ ಇಕ್ಕಟ್ಟಾದ ಕಣಿವೆಯಲ್ಲಿ ಬಂಡೆಗಳ ಮೇಲಿಂದ ಧುಮುಕಿ ಜಲಪಾತವನ್ನು ಸೃಷ್ಟಿಸುತ್ತದೆ. ಚುಂಬನಕಟ್ಟೆಯು ಒಂದು ಯಾತ್ರಾಸ್ಥಳವಾಗಿದೆ. ಕಾವೇರಿ ನದಿ ಇಲ್ಲಿ 81 ಅಡಿ ಇತ್ತರದಿಂದ ಮೆಟ್ಟಲು ಮೆಟ್ಟಲಾಗಿ ಧುಮುಕುವ ರೀತಿ ಆಕರ್ಷಕವಾದದ್ದು. ಇದರಲ್ಲಿ ಮೈಸೂರು ಜಿಲ್ಲೆಗೆ ಸೇರಿದಂತೆ ಕಾವೇರಿ ನದಿಗೆ ಇನ್ನೂ ಒಂದು ಜಲಪಾತವಿದೆ ಇದನ್ನು 'ಹೊಗೇನ್‌ಕಲ್' ಜಲಪಾತವೆನ್ನುತ್ತಾರೆ.

ಹೀಗೆ ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಪರ್ವತಾವಳಿಗಳು ಮತ್ತು ಅವುಗಳ ಮೇಲೆ ಹುಟ್ಟುವ ನದಿಗಳಿಂದಾಗಿ ಅನೇಕ ಸುಂದರ ನಿಸರ್ಗ ಸೃಷ್ಟಿಗಳು ನಮ್ಮ ಮನಸೂರೆಗೊಳ್ಳುತ್ತವೆ. ಜಲಪಾತಗಳು ನೋಡಲು ಚೆನ್ನ ನಿಸರ್ಗ ಪ್ರಿಯರಿಗೂ ಸಾಹಸ ಪ್ರವೃತ್ತಿಯುಳ್ಳ-ವರಿಗೂ ಇದೊಂದು ಸಂಪದ್ಭರಿತ ನಾಡು ಮುಂಬಯಿಯಂಥ ಪಟ್ಟಣವಾಸದಿಂದ ದೂರಾಗಿ ತಾಯ್ನಾಡಿನ ಕಡೆ ಹೋದಾಗ ಇಂಥ ಒಂದಾದರೂ ದೃಶ್ಯವನ್ನು ನೋಡಿ ಬರುವ ಅವಕಾಶ ಸಿಕ್ಕಿದರೆ ಆಗುವ ಆನಂದ ಅಪಾರ.

## ಸೃಷ್ಟಿಕರ್ತನ ಸೃಷ್ಟಿಕರ್ತ

ಕಳ್ಳನ ಹುಳ್ಳನೆ ಮನಸ್ಸಿನ
ಅಪರಾಧಿ ಮನೋಭಾವ,
ಪ್ರತ್ಯಕ್ಷವಿದ್ದರೂ ಪ್ರಮಾಣಿಸಿ ನೋಡದೆ
ಬೆಳೆದ ಮೂಡ ನಂಬಿಕೆ,
ಆಕಸ್ಮಿಕವನ್ನೇ ಅದೃಷ್ಟವೆಂದು ಕರೆಯುವ
ಮನೋದೌರ್ಬಲ್ಯ
ಆಸೆಗಳ ಗುರಿ ಮುಟ್ಟಲಾಗದಿದ್ದಾಗ
ಬೆಳೆದ ಯಾಚಕ ಬುದ್ಧಿ,
ಅಪ್ರಯತ್ನಪೂರ್ವಕವಾಗಿ ಸೃಷ್ಟಿಸುವುವು
ಆಸರೆಗೊಬ್ಬ ಸೃಷ್ಟಿಕರ್ತನನ್ನು !

## ಶಿ-ಕ್ಷಣ

ಏನನ್ನೂ ಕಲಿಯುವುದಿಲ್ಲ
ವಾದರೂ ಏನೇನೂ
ಎಷ್ಟೆಷ್ಟು ಕಲಿಯಲಿ
ಕ್ಕಿದೆಯೆಂಬುದರ
ತಿಳಿವು

## ಯೌವನ

ಪ್ರೇಮಕತೆ
ಗಳನೋದಿ ಸಹಸ್ರ
ಪ್ರಣಯ ಕಾವ್ಯ
ಗಳ ರಚಿಸಿ ಕಲ್ಪನೆ
ಯ ಕನ್ಯೆಯ
ನನಸಲಿ ಕಾಣಲಾಗದೆ
ಪ್ರಿಯೆಯಿಲ್ಲದ
ಪ್ರೇಮಿಯಾಗಿ
Pseudo' ವಿರಹಿಯ
ನ್ನಾಗಿಸುವ
ಹರೆಯದ
ಸಮಯ

-ಕೆ.ಪಿ. ರವಿಶಂಕರ.


**MATRIMONIAL**

WANTED ALLIANCE FOR A POST GRADUATE MALE DOCTOR 30 YEARS 5 FEET 5 INCHES (162 Cms) SMARTHA BRAHMIN. GOTRA GAUTAMA. LIKELY TO PROCEED TO U.S.FOR HIGHER STUDIES. WRITE TO/CONTACT WITH HOROSCOPE AND BIODATA (INCLUDING PRECISE TIME OF BIRTH ). CONTACT BOX. No. 63, NESARU TINGALOLE, THE MYSORE ASSOCIATION, BOMBAY - 400 019.

**MATRIMONIAL**

25 years /160Cms. Madhwa Brahmin boy studying M.B.A. (MARKETING) FINAL, Company Secretary ship course (INTER), working with Air Force, Since 8 years, Sal 2400 (Cpl) Plans to join Executive cadre in public sector after M.B.A. & continue higher studies (Ph.D. in Marketing) knows kannada Telgu, Hindi, English, Non Smoker, Non drinker, Simple, KOUNDINYA GOTRA.

Seeks a simple, understanding life partner from middle class family Non Koundinya Gotra Sub caste/ Employment no bar.

**CONTACT BOX 64,**
**THE MYSORE ASSOCIATION**
**BOMBAY.**

# ಸುತ್ತಮುತ್ತ

## ಬರಹಗಾರನಿಗೆ ಪ್ರಾಮಾಣಿಕತೆ ಅಗತ್ಯ

ಡಾ॥ ಶಿವರಾಮ ಕಾರಂತ

ಬರಹಗಾರನು ತನ್ನ ಅನುಭವದ ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕವಾಗಿರಬೇಕೆಂದು ಡಾ॥ ಶಿವರಾಮ ಕಾರಂತರು ಅಭಿಪ್ರಾಯ ಪಟ್ಟರು. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಡಿ-16 ಮತ್ತು 17 ರಂದು ನಡೆದ 'ಸ್ವಾತಂತ್ರ್ಯೋತ್ತರ ಭಾರತೀಯ ಕಾದಂಬರಿ' ಯನ್ನು ಕುರಿತ ರಾಷ್ಟ್ರಮಟ್ಟದ ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿದ ಅವರು ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದ ಬೆಳವಣಿಗೆಯನ್ನು ಅವಲೋಕಿಸಿದರು. ಖ್ಯಾತ ಮರಾಠಿ ಸಾಹಿತಿ ಪ್ರೊ. ಕೆ.ಜಿ. ಪುರೋಹಿತ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ವಿಭಾಗ ಮುಖ್ಯಸ್ಥ ಡಾ॥ ತಾಳ್ತಜೆ ವಸಂತಕುಮಾರ ಅವರು ಸ್ವಾಭಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕೆ.ಎಂ.ಮಾಥ್ಯೂ ವಂದಿಸಿದರು.

ಮುಂದೆ ನಾಲ್ಕು ಗೋಷ್ಠಿಗಳಲ್ಲಿ ಏಳು ಭಾಷೆಗಳ ಕಾದಂಬರಿಗಳ ಒಲವುಗಳನ್ನು ಕುರಿತಂತೆ ವಿವಿಧ ವಿದ್ವಾಂಸರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಪ್ರತಿ ಪ್ರಬಂಧದ ಕೊನೆಯಲ್ಲೂ ಗಮನಾರ್ಹ ಚರ್ಚೆಗಳು ನಡೆದವು.

ಡಿ-17 ರಂದು ಪ್ರೊ.ರಾಜಾಧ್ಯಕ್ಷ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಹಿರಿಯ ಕನ್ನಡ ಸಾಹಿತಿ ಡಾ॥ ರಾ.ಯ. ಧಾರವಾಡಕರ್ ಅವರು ಸಮಾರೋಪ ಭಾಷಣ ಮಾಡಿದರು. ಡಾ॥ ಆರ್.ಸಿ.ಹಿರೇಮಠ ಅವರು ಶುಭಾಶಂಸನೆಗೈದರು. ಕೊನೆಯಲ್ಲಿ ಶ್ರೀ ವರದರಾಜ ಚಂದ್ರಗಿರಿ ವಂದನಾರ್ಪಣೆ ಮಾಡಿದರು.

ಮುಂಬಯಿಯ ಹಿರಿಯ-ಕಿರಿಯ ಬರಹಗಾರರೂ, ವಿಶೇಷ ಆಹ್ವಾನಿತರೂ ಪಾಲ್ಗೊಂಡ ಈ ಮಹತ್ವದ ಅಂತರ್ ಭಾರತೀಯ ವಿಚಾರ ಸಂಕಿರಣವು ಯು.ಜಿ.ಸಿ. ಮತ್ತು ಮುಂಬಯಿಯ ಉತ್ತಮ್ ಎಂಟರಪ್ರೈಸಸ್‌ನ ಉದ್ಯಮಿ ಶ್ರೀ ಪ್ರಕಾಶ ಶೆಟ್ ಇವರ ಆರ್ಥಿಕ ನೆರವಿನಿಂದ ಸಂಯೋಜಿಸಲ್ಪಟ್ಟಿತ್ತು.

ಡಾ. ತಾಳ್ತಜೆ ವಸಂತಕುಮಾರ.

## ಮಕ್ಕಳ ಸಮ್ಮೇಳನ

ಕರ್ನಾಟಕ ಸಂಘದಲ್ಲಿ ಮುಂಬಯಿಯ ಕನ್ನಡ ಶಾಲಾ ವಿದ್ಯಾರ್ಥಿಗಳ ಸಮ್ಮೇಳನವೊಂದು ಇತ್ತೀಚೆಗೆ ನಡೆಯಿತು. ದಿನಪೂರ್ತಿ ನಡೆದ ಈ ಸಮ್ಮೇಳನದಲ್ಲಿ 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

'ಮಾಲ್ಗುಡಿ ಡೇಸ್' ಟೆಲಿ ಧಾರವಾಹಿ ಖ್ಯಾತಿಯ ಬಾಲನಟ ಎಸ್.ರಘುರಾಮ್ ಸಮ್ಮೇಳನದ ಮುಖ್ಯ ಅತಿಥಿಯಾಗಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಡೊಂಬಿವಲಿಯ ಶ್ರೀ ಮಂಜುನಾಥ ವಿದ್ಯಾಲಯದ ವಿದ್ಯಾರ್ಥಿನಿ ಉಷಾ ಪೂಳ್ಳ ವಹಿಸಿದ್ದರು.

ಈ ಸಂಧರ್ಭದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿನ ವಿಜೇತರಿಗೆ ಬಹುಮಾನಗಳನ್ನು ವಿತರಿಸಿ ರಘುರಾಮ್ ಮಾತನಾಡುತ್ತಾ "ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಸಮಯವಿಲ್ಲ ಎನ್ನುವುದು ಸುಳ್ಳು. ಮನಸ್ಸಿದ್ದರೆ ಸಮಯವನ್ನು ತಾನೇ ತಾನಾಗಿ ಹೊಂದಿಕೊಳ್ಳಬಹುದು " ಎಂದರು. ಅಧ್ಯಕ್ಷೆ ಉಷಾ ಪೂಳ್ಳ ಕೂಡಾ ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಬೇಕೆಂದು ಒತ್ತಿ ಹೇಳುತ್ತಾ ಇದಕ್ಕೆ ಪಾಲಕರ ಪ್ರೋತ್ಸಾಹ ಬೇಕೆಂದರು.

ಮನೋರಂಜನಾ ಕಾರ್ಯಕ್ರಮದಲ್ಲಿ ಕುರ್ಲಾ ಹಾಲ್‌ರೋಡ್ ಮುನಿಸಿಪಲ್ ಕನ್ನಡ ಶಾಲೆಯಿಂದ ಪೂಜಾಗೀತೆ, ಎನ್.ಕೆ.ಎಸ್, ವಿದ್ಯಾರ್ಥಿಗಳಿಂದ 'ಭೀಷ್ಮ ಸಂಕಲನ' ನೃತ್ಯ ನಾಟಕ ಪ್ರದರ್ಶಿಸಲ್ಪಟ್ಟಿತು. ಶ್ಯಾಮ್ ಬೆನಗಲ್‌ರವರ "ವಿಶನ್ ಅಫ್ ನೆಹರೂ" ಸಾಕ್ಷಚಿತ್ರ ಮತ್ತು "ಗಂಗಾ ಭವಾನಿ' ಮಕ್ಕಳ ಚಿತ್ರವನ್ನು ಕೊನೆಗೆ ತೋರಿಸಲಾಯಿತು. ಈ ಸಂದರ್ಭಕ್ಕಾಗಿಯೇ ಏರ್ಪಡಿಸಲಾಗಿದ್ದ ಹಸ್ತಕಲಾ ಪ್ರದರ್ಶನವನ್ನು ಮುಖ್ಯ ಅತಿಥಿ ರಘುರಾಮ್ ಉದ್ಘಾಟಿಸಿದರು. ಒಟ್ಟು ಕಾರ್ಯವನ್ನು ಮಕ್ಕಳೆ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು.

## ರಾಷ್ಟ್ರೀಯ ಕನ್ನಡ ಸಂಸ್ಥೆಯ ಸುವರ್ಣ ಮಹೋತ್ಸವ

ಮುಂಬಯಿಯ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವವು ಡಿಸೆಂಬರ್ 17 ರಂದು ಬಲು ಸಡಗರದಿಂದ ಆಚರಿಸಲ್ಪಟ್ಟಿತು. ಜ್ಞಾನಪೀಠ ಪ್ರಶಸ್ತಿ ವಿಜೇತ ಖ್ಯಾತ ಸಾಹಿತಿ ಡಾ॥ ಶಿವರಾಮ್ ಕಾರಂತರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರಾದ ಪ್ರೊ.ಗಂಗಾಧರ ಗಾಡಗೀಳ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಶಿಕ್ಷಣ ಸಂಸ್ಥೆಯ ಹಿಂದಿನ ಕಾರ್ಯಕರ್ತ ಹಳೆಯ ವಿದ್ಯಾರ್ಥಿಗಳೂ ಬಲು ಉತ್ಸಾಹದಿಂದ ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾದ ಡಾ॥ ಶಿವರಾಮ ಕಾರಂತ ಅವರು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಮುಂಬಯಿಯ ಕನ್ನಡಿಗರೂ ಕನ್ನಡೇತರರಿಗೂ ಕಳೆದ 50 ವರ್ಷಗಳಿಂದ ಸಲ್ಲಿಸಿದ ಶೈಕ್ಷಣಿಕ ಸೇವೆಯನ್ನು ಶ್ಲಾಘಿಸುತ್ತಾ ಮಕ್ಕಳ ಮೇಲಿನ ಪಠ್ಯಪುಸ್ತಕಗಳ ಭಾರವನ್ನು ಹಗುರುಗೊಳಿಸಿ ಪ್ರಾಕೃತಿಕ ಪರಿಸರದಲ್ಲಿ ಸ್ವಾಭಾವಿಕವಾದ ರೀತಿಯಲ್ಲಿ ಶಿಕ್ಷಣ ನೀಡಬೇಕೆಂದೂ ಕೇವಲ ವಿದ್ವತ್ತಿಗಿಂತ ಮಾನವೀಯತೆಗೆ ಹೆಚ್ಚಿನ ಮಹತ್ವವೀಯಬೇಕೆಂದೂ ಸಲಹೆ ಮಾಡಿದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರೊ ಗಾಡಗೀಳ ಅವರು ಕನ್ನಡ ಮರಾಠಿ ಭಾಷಿಕರ ಸಾಂಸ್ಕೃತಿಕ ಪರಂಪರೆಯನ್ನುವಿಶ್ಲೇಷಿಸುತ್ತಾ ಎರಡೂ ಭಾಷೆಗಳನ್ನಾಡುವ ಜನರು ಒಂದಾಗಿ ಬಾಳುವುದು ಮುಖ್ಯವೆಂದು ಸೂಚಿಸಿದರು. ಸಂಸ್ಥೆಯ ಉಪಾಧ್ಯಕ್ಷ ಶ್ರೀ ವ್ಯಾಸರಾಯ ಬಲ್ಲಾಳರು ಸಕಲರ ಆಭಾರಮನ್ನಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಹಿಂದಿನ ಕಾರ್ಯಕರ್ತರಾದ ಶ್ರೀ ಅ.ಸು. ಕೃಷ್ಣರಾವ್ ಚಂಪಕನಾಥ್ ಮತ್ತು ಪ್ರಪ್ರಥಮ ಪ್ರಾಚಾರ್ಯ ಶ್ರೀ ಗುಂಡೂರಾವ್ ಶ್ರೀಮತಿ ಕಮಲಾಬಾಯಿ ಅವರನ್ನೂ ಸಧ್ಯದ ವ್ಯವಸ್ಥಾಪಕ ಸಮಿತಿಯ ಸದಸ್ಯರನ್ನೂ, ಶಿಕ್ಷಕವೃಂದವನ್ನೂ ಸತ್ಕರಿಸಲಾಯಿತು.

ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಾದರ ಪಡಿಸಿದ ವೈವಿಧ್ಯದ ಸಾಂಸ್ಕೃತಿಕ ಕಾರ್ಯಕ್ರಮಗಳು ರಸಿಕರ ಮನರಂಜಿಸಿದವು. ಮುನ್ನಾದಿನ ಡಾ॥ ಕೆ.ಕೆ. ಹೆಬ್ಬಾರ ಅವರು ಬಾಲಕರ ಹಸ್ತಕಲಾ ಪ್ರದರ್ಶನವನ್ನು ಉದ್ಘಾಟಿಸಿದರು. ದಾನಿ ಶ್ರೀ.ಪಿ.ಆರ್. ಆಚಾರ್ಯ ಅವರ ಹಿರಿತನದಲ್ಲಿ ಬಾಗಿಲುಕೋಟೆಯ ಮಾಲಾ ಬಾಯಿ ಬೀಳಗಿ ಅವರ ಸುಗಮ ಸಂಗೀತ ಹಾಗೂ ಜಾನಪದ ಸಂಗೀತ ರತ್ನ ಬಾಳಪ್ಪ ಹುಕ್ಕೇರಿ ಅವರ ಜಾನಪದ ಸಂಗೀತ ಕಾರ್ಯಕ್ರಮ ನಡೆಯಿತು.

## ವಡಾಲದ ಎನ್.ಕೆ.ಇ.ಎಸ್. ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳಿಗೆ ಕರೆ

ಐವತ್ತು ವರ್ಷಗಳಷ್ಟು ಸುದೀರ್ಘ ಅವಧಿಯಲ್ಲಿ ವಡಾಲದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಪ್ರೌಢ ಶಾಲೆಯಲ್ಲಿ ಕಲಿತುಹೋದ ಸಹಸ್ರ ಸಂಖ್ಯೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಈಗ ಪ್ರಪಂಚದ ಮೂಲೆ ಮೂಲೆಗಳಲ್ಲಿ ಹರಡಿರಬೇಕು. ಅನೇಕರು ಅನ್ಯ ಕ್ಷೇತ್ರಗಳಲ್ಲಿ ಅತ್ಯುನ್ನತ ಪದವಿ ಪಡೆದವರಿರಬೇಕು. ಉದ್ದಿಮೆ ವ್ಯಾಪಾರ ಗಳಲ್ಲಿ ಗಮನೀಯ ಯಶಸ್ಸನ್ನು ಗಳಿಸಿದವರಿರಬೇಕು. ಅನೇಕರು ನಿವೃತ್ತ ಬದುಕನ್ನು ಬಾಳುತ್ತಿರಬೇಕು. ಅಸಂಖ್ಯರು ಮುಂಬಯಿಯಲ್ಲಿಯೇ ಉಳಿದುಕೊಂಡಿರಬೇಕು.

ಚಿನ್ನದ ಹಬ್ಬದ ಸಂಧರ್ಭದಲ್ಲಿ ಹಳೆಯ ವಿದ್ಯಾರ್ಥಿಗಳನ್ನು ಸಂಘಟಿಸುವ ಕಾರ್ಯ ಉತ್ಸಾಹದಿಂದ ನಡೆದಿದೆ. ಸಹಸ್ರಾರು ಹಳೆಯ ವಿದ್ಯಾರ್ಥಿಗಳಿಗೆ ತಮ್ಮ ಶಾಲಾದಿನಗಳ ಸವಿನೆನಪುಗಳನ್ನು ಹಸಿರಾಗಿಸುವ ಅವಕಾಶ ವರ್ಷಗಟ್ಟಲೇ ಬೇರ್ಪಟ್ಟ ತಮ್ಮ ಸಹಪಾಠಿಗಳನ್ನು ಗುರುತಿಸಿ ಮಾತನಾಡಿಸುವುದೇ ಒಂದು ರೋಮಾಂಚನಕಾರಿ ಸಂಗತಿ.

ಈ ಹಿಂದೆಯು ಪತ್ರಿಕಾ ಪ್ರಕಟಣೆಗಳನ್ನು ನೀಡಿ ಹಳೆಯ ವಿದ್ಯಾರ್ಥಿಗಳನ್ನು ಸಂಘಟಿಸಲು ಕರೆಯಲಾಗಿದೆ. ಕಾರಣಾಂತರವಾಗಿ ಅನೇಕರಿಗೆ ಸುದ್ದಿ ತಲುಪುವುದು ಸಾಧ್ಯವಾಗುವುದಿಲ್ಲ.

ಇತ್ತೀಚೆಗೆ 19-11-89 ರಂದು ಶಾಲೆಯಲ್ಲಿ ಸಭೆ ಗೂಡಿದ ಆರವತ್ತು ಹಳೆಯ ವಿದ್ಯಾರ್ಥಿಗಳಲ್ಲಿ 1951-52 ರಷ್ಟು ಹಿಂದಿನ ಮೆಟ್ರಿಕ್ ತಂಡದ ಒಬ್ಬಿಬ್ಬರು ಹಾಜರಿದ್ದರು. ಇನ್ನು ಮುಂದೆ ನಿಯಮಿತವಾಗಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ಸಂಜೆ 4 ಘಂಟೆಗೆ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳು ಸಭೆ ಸೇರುವುದೆಂದು ಒಮ್ಮತದ ನಿರ್ಣಯವಾಯಿತು. ವರ್ಷಕ್ಕೊಂದು ಬಾರಿಯಾದರೂ ಬೃಹತ್ ಪ್ರಮಾಣದ 'ಸ್ನೇಹಕೂಟ' ವನ್ನು ಜರುಗಿಸಬೇಕೆಂದು ಸಭೆ ಒಪ್ಪಿಕೊಂಡಿತು. ಎನ್.ಕೆ.-ಎಸ್‌ಶಾಲೆಯ ಹಳೆಯ ವಿಧ್ಯಾರ್ಥಿಗಳು ಸಿ. ಆರ್.-ಶ್ಯಾಮಲ ಇವರನ್ನು ಕೂಡಲೇ ಸಂಪರ್ಕಿಸಬೇಕೆಂದು ನಮ್ರ ವಿನಂತಿ

-ರತ್ನಾಕರ ಶೆಟ್ಟಿ

## 'ಕನ್ನಡ ಸಂಘ'

### ರಾಮನಿರಂಜನಝುನ್‌ಝುನ್‌ವಾಲ ಕಾಲೇಜು ಅಂತರ್ ಕಾಲೇಜು ಪ್ರತಿಭಾ ಸ್ಪರ್ಧೆಗಳ ವರದಿ

ರಾಮನಿರಂಜನ ಝುನ್‌ಝುನ್‌ವಾಲ ಕಾಲೇಜು ದಿನಾಂಕ 10-12-1989 ರ ರವಿವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಕನ್ನಡ ಸಂಘದ ವತಿಯಿಂದ ಈ ವರ್ಷದ ಅಂತರ ಕಾಲೇಜಿನ ಪ್ರತಿಭಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಪ್ರೊ. ರಾಮನಾರಾಯಣ ಐಲ್ ಅವರು ಮುಖ್ಯ ಅತಿಥಿಗಳಾಗಿದ್ದರು. ಚರ್ಚೆ ,ಕನಕದಾಸ ಕಾವ್ಯಗಾಯನ, ಸಮೂಹಗಾನ ಮತ್ತು ಏಕಪಾತ್ರಾಭಿನಯ ಸ್ಪರ್ಧೆಗಳಲ್ಲಿ ಮುಂಬಯಿಯ ವಿವಿಧ ಕಾಲೇಜುಗಳಿಂದ ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀ ವರದರಾಜಗಿರಿ, ಶ್ರೀ ಭರತ್ ಕುಮಾರ್ ಪೊಲಿಪು, ಶ್ರೀಮತಿ ಲಕ್ಷ್ಮೀರಾವ್ ಮತ್ತು ದಮಯಂತಿ ಹುನಗುಂದ ಬಂದಿದ್ದರು

ಜಿ.ಡಿ.ಜೋಶಿ.

Regn. No. 040015/86
Reg. No. MH/BY/NE121/89

# ಸುತ್ತಮುತ್ತ

## ಮುಂಬೈ ಕನ್ನಡ ಸಂಘದಲ್ಲಿ ನಾಡಹಬ್ಬ ಮತ್ತು ರಾಜ್ಯೋತ್ಸವ ಆಚರಣೆ

ಮುಂಬೈ ಕನ್ನಡ ಸಂಘದ ಆಶ್ರಯದಲ್ಲಿ ತಾರೀಖು 19-11-1989 ರಂದು ನಾಡಹಬ್ಬ ಮತ್ತು ರಾಜ್ಯೋತ್ಸವ ದಿನಾಚರಣೆಯನ್ನು ಮೈಸೂರು ಅಸೋಸಿಯೇಷನ್ ಸಭಾಗಾರದಲ್ಲಿ ಆಚರಿಸಲಾಯಿತು. ಈ ಸಭಾರಂಭಕ್ಕೆ ಮುಖ್ಯ ಅತಿಥಿಯಾಗಿ ಕನ್ನಡದ ಖ್ಯಾತ ನಾಟಕಕಾರರೂ, ಕರ್ನಾಟಕ ಸರಕಾರದ ರಾಜ್ಯೋತ್ಸವದ ಪ್ರಶಸ್ತಿ ವಿಜೇತರೂ ಆಗಿರುವ ಶ್ರೀ ಕೆ.ಜಿ. ರಾವ್ ಆಗಮಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಮುಂಬೈ ಕೆ.ಜಿ. ಸೋಮಯ್ಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ, ಕನ್ನಡ ಕವಿ ಹಾಗೂ ವಿಮರ್ಶಕರೂ ಆದ ಶ್ರೀ ಸಂಜೀವ ಶೆಟ್ಟಿಯವರು ವಹಿಸಿದ್ದರು.

ಮನೋರಂಜನಾ ಕಾರ್ಯಕ್ರಮದ ಅಂಗವಾಗಿ ಡೊಂಬಿವಲಿಯ ಅನುಜಾ ಮಹಿಳಾ ಸದಸ್ಯೆಯರಿಂದ ಕಿಸಾ ಗೌತಮಿ ಕಿರುನಾಟಕ, ಕೆರೆಗೆ ಹಾರ ನೃತ್ಯ-ನಾಟಕಗಳನ್ನು ಆಡಿ ತೋರಿಸಲಾಯಿತು. ಶ್ರೀಮತಿ ಡಾ. ಅಲಕಾನಂದ ಕಿಶೋರ ರವರು ದ್ರೌಪದಿ ವಸ್ತ್ರಾಪಹರಣ ಪ್ರಸಂಗವನ್ನು ನವರಸ ರೂಪದಲ್ಲಿ ಆಡಿ ತೋರಿಸಿದರು.

-ಜಿ.ಎಸ್.ನಾಯಕ್.

## ವಿಚಾರ ಸಂಕಿರಣ

ಡೊಂಬಿವಲಿಯ ಅನುಜಾ ಮಹಿಳಾ ಸಂಘದವರು ಕನ್ನಡ ಪ್ರಚಾರ ಸಮಿತಿಯ ಸಹಯೋಗದಲ್ಲಿ ಶನಿವಾರ 212-89 ರಂದು -ಮಧ್ಯಾಹ್ನ 3 ಘಂಟೆಗೆ ಡೊಂಬಿವಲಿಯ ತಿಲಕ್ ವಿದ್ಯಾ-ಮಂದಿರದಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.

"ಕನ್ನಡ ಸಾಹಿತ್ಯ ಸಂಸ್ಕೃತಿ ಭಾಷೆ ಹಾಗೂ ಶಿಕ್ಷಣ" ಈ ವಿಷಯದ ಮೇಲೆ ರಾಮ್ ನಿರಂಜನ್ ಝುನ್‌ಝುನ್ ವಾಲಾ ಕಾಲೇಜಿನ ಪ್ರೋ ಡಾ ಸಂಜೀವ ಶೆಟ್ಟರೂ ಹಾಗೂ ಅನುಜಾ ಮಹಿಳಾ ಸಂಘದ ಕಾರ್ಯದರ್ಶಿನಿ ಶ್ರೀಮತಿ ಸುಮಾ ದ್ವಾರಕಾನಾಥರವರೂ ಮಾತನಾಡಿದರು. ಕನ್ನಡದ ಉಳಿವಿಗಾಗಿ ಮಹಿಳೆಯರೇ ಮಾತೃಭಾಷೆಯಲ್ಲಿ ಅಭಿಮಾನವಿಟ್ಟು ಶ್ರಮಿಸಬೇಕೆಂದೂ ಮನೆಯೇ ಮಕ್ಕಳ ಮೊದಲ ಪಾಠಶಾಲೆಯಾದುದರಿಂದ ಕನ್ನಡಾಭ್ಯಾಸವು ಮನೆಯಿಂದಲೇ ಬೆಳೆಯಬೇಕೆಂದು ಇವರುಗಳು ಅಭಿಪ್ರಾಯವಿತ್ತರು. ಚರ್ಚಾ ಕೂಟಗಳೂ ವಿಚಾರ ಸಂಕಿರಣಗಳೂ ಹೆಚ್ಚಿ ಕನ್ನಡ ಸಂಸ್ಕೃತಿಯನ್ನು ಉಳಿಸಿಕೊಂಡು ಬರಬೇಕೆಂದು ಕರೆಕೊಟ್ಟರು.

## ಸಂಗೀತೋತ್ಸವ 1990

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯವು "ಸಂಗೀತೋತ್ಸವ 1990" ಅನ್ನು ಆಚರಿಸಲಿದೆ. ಜನವರಿ 26 ರಂದು ವಿದ್ಯಾಲಯದ ವಿದ್ಯಾರ್ಥಿಗಳಿಂದ "ಪುರಂದರ ದಾಸರ ಜನ್ಮದಿನಾಚರಣೆಯ ಜನವರಿ 27 ರಂದು ಪಂಡಿತ್ ಭೀಮಸೇನ್ ಜೋಶಿ ಯವರ ಶಿಷ್ಯರಾದ ಪಂಡಿತ್ ಮಾಧವ ಗುಡಿಯರಿಂದ ಹಿಂದೂಸ್ತಾನಿ ಹಾಡುಗಾರಿಕೆ ಮತ್ತು ಜನವರಿ 28 ರಂದು ವಿದ್ವಾನ್ ಕದ್ರಿ ಗೋಪಿನಾಥ ರಿಂದ ಕರ್ನಾಟಕ ಸಂಗೀತದಲ್ಲಿ ಸ್ಯಾಕ್ಸೋಫೋನ್ ನುಡಿಸುವಿಕೆ ಇದೆ. ಈ ಎಲ್ಲಾ ಕಾರ್ಯಕ್ರಮಗಳೂ ಡೊಂಬಿವಲಿಯ ತಿಲಕ್ ವಿದ್ಯಾಮಂದಿರದ ಮೈದಾನದಲ್ಲಿ ನಡೆಯುವುವು.

## 'ಧ್ವನಿ' ವಾರ್ಷಿಕೋತ್ಸವ

ಮುಂಬೈಯ ಸಾಹಿತ್ಯಕ ಬಳಗ 'ಧ್ವನಿ' ತನ್ನ ನಾಲ್ಕನೆಯ ವಾರ್ಷಿಕೋತ್ಸವ ಮತ್ತು ಬಹುಮಾನ ವಿತರಣಾ ಸಮಾರಂಭವನ್ನು ಕಳೆದ ಡಿಸೆಂಬರ್ 8 ಕ್ಕೆ ವಿಶ್ವೇಶ್ವರಯ್ಯ ಸ್ಮಾರಕ ಮದಿರದಲ್ಲಿ ಆಚರಿಸಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪ್ರಸಿದ್ಧ ಕವಿ ಶ್ರೀ ಜಯಂತ ಕಾಯ್ಕಿಣಿ ಅವರು ಮನುಷ್ಯ ತನ್ನ ಕೆಲವೊಂದು ಸೃಜನಶೀಲ ಆಸಕ್ತಿಗಳನ್ನು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪೂರೈಸಿಕೊಳ್ಳಲು ಅಸಾಧ್ಯನಾದರೂ ಕ್ರಿಯಾತ್ಮಕನಾದ ಆತನು ಅವುಗಳನ್ನು ಎಂದೂ ಬಿಟ್ಟುಕೊಡದೆ ಪರಕೀಯ ಪರಿಸರದಲ್ಲೂ ತನ್ನ ಅಸ್ತಿತ್ವವನ್ನು ಗುರುತಿಸುವ ಪ್ರಯತ್ನ ಮಾಡುತ್ತಾನೆ ಎಂದು ಹೇಳಿ ಧ್ವನಿ ಹಮ್ಮಿಕೊಳ್ಳುವ ವಿಶಿಷ್ಟ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

ಧ್ವನಿ ಏರ್ಪಡಿಸಿದ್ದ ಕಥೆ ಮತ್ತು ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆಯನ್ನು ಮಾಡಲಾಯಿತು..

ಸಮಾರಂಭದ ಕೊನೆಯಲ್ಲಿ ವಿವಿಧ ವಿನೋದಾವಳಿಗಳ ಅಂಗವಾಗಿ ಸಂಘದ ಸದಸ್ಯರು ಶ್ರೀ ಪೂರ್ಣಚಂದ್ರ ತೇಜಸ್ವಿ ರಚಿತ 'ಯಮಳ ಪ್ರಶ್ನೆ' ನಾಟಕವನ್ನು ಅಭಿನಯಿಸಿದರು.

-ಅಶೋಕ ಶೆಟ್ಟಿ.

## ಕನ್ನಡ ಸ್ನೇಹ ಸುಧಾ' ಚೆಂಬೂರು

"ಕನ್ನಡ ಸ್ನೇಹ ಸುಧಾ " ಎಂಬ ಸಂಘವು ಮುಂಬಯಿಯ ಮಹಾನಗರದಲ್ಲಿರುವ ಕನ್ನಡಿಗರು ಒಂದು ವೇದಿಕೆಯ ಮೇಲೆ ಬರುವಂತೆ ಆಗಬೇಕೆಂದು ಬಯಸಿ ಅದರ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡಿದೆ.

ಈ ಯೋಜನೆಯ ಕಾರ್ಯಸಾಧನೆಗಾಗಿ ಕನ್ನಡ ಸ್ನೇಹ ಸುಧಾ ಸಂಘವನ್ನು ಸ್ಥಾಪಿಸುವ ಘನ ಕಾರ್ಯದಲ್ಲಿ ತಾವು ಸಹಕಾರ ನೀಡಬೇಕೆಂದು ಕೇಳಿಕೊಳ್ಳಲಾಗಿದೆ. ಕನ್ನಡ ಸ್ನೇಹ ಸುಧಾ ಔಪಚಾರಿಕ ಉದ್ಘಾಟನಾ ಸಮಾರಂಭ 14-1-1990 ಸಂಜೆ 5-00 ಘಂಟೆಗೆ ಚೆಂಬೂರಿನ ಮಹಿಳಾ ಸಮಾಜ ಹಾಲಿನ ಮೊದಲ ಮಾಳಿಗೆಯ ಸಭಾಭವನದಲ್ಲಿ ನೆರವೇರುವುದು.

ಈ ಉದ್ಘಾಟನಾ ಸಮಾರಂಭವನ್ನು ಯಶಸ್ವಿಯಾಗುವಂತೆ ಮಾಡಲು ಕನ್ನಡಿಗರಾದ ತಮ್ಮೆಲ್ಲರ ಸಹಕಾರದ ಅಗತ್ಯವಿದೆ. ಈ ಸಂಘಕ್ಕೆ ಸದಸ್ಯತ್ವ ಪಡೆಯಲು ಇಚ್ಛಿಸುವವರು ಈ ಕೆಳಗೆ ನಮೂದಿಸಿರುವ ಸದಸ್ಯರನ್ನು ಸಂಪರ್ಕಿಸಬಹುದು.

1) ಶ್ರೀಮತಿ ವತ್ಸಲಾ ಆರ್.ರಾವ್.
   ಫೋನ್ ನಂ.5559750
2) ಡಾ. ಕುಮಾರ ಸ್ವಾಮಿ ಸಿ. 7. ಅನುರಾಗ,
   ದೇವನಾರ್-400088,
   ಫೋನ್ ನಂ 5550968
3) ಡಾ. ಆರ್.ಮಾಧವರಾವ್, 8/9 ಸ್ಟ್ಯಾಂಡರ್ಡ್ ಪಾರ್ಕ,
   ಚೆಂಬೂರು, ಮುಂಬಯಿ - 400071
   ಫೋನ್ ನಂ, 528966
4) ಸಿ-ಎಸ್. ದಿನೇಶ್, 180,ಸುಕೃತಿ,
   ಮೈಸೂರು ಕಾಲೋನಿ ಅನಿಕ್ ಚೆಂಬೂರು,
   ಮುಂಬಯಿ - 400 074
   ಫೋನ್ ನಂ. 551302●

**EMPLOYMENT OPPORTUNITIES FOR GRADUATES ENGINEERS /LADY EXECTUTIVES/ STENOGRAPHERS.**

A BOMBAY & BANGALORE BASED FIRM OF VALUERS AND CONSULTANTS WHO ARE IN THE APPROVED LIST OF MOST OF THE FINANCIAL INSTITUTIONS AND BANKS NEED DYNAMIC AND ENERGETIC ENGINEERS OF ANY DISCIPLINE TO WORK AS TECHNICAL EXECUTIVES/ GRADUATE LADIES WITH EXCEPTIONAL COMMUNICATIONS SKILL FOR LIASON WORK WITH BANKS INVOLVING DAILY VISITS/LADY GRADUATE STENOGRAPHERS.

**ATTRACTIVE SALARY & INCENTIVES OFFERED FOR THE ENTHUSIASTIC & DESERVING. APPLY SHARP:**

The Consultant in chief,
Business & Industrial consulatants,
Room No. 6 Sailor Buidling, III Floor
(Left wing),
373, Dr.D.N. Road. Bombay 400 001.

## ಸನ್ಮಾನ

ಕೆ.ಜಿ. ಸೋಮಯ್ಯ ಕಾಲೇಜಿನ ಕನ್ನಡ ವಿದ್ಯಾರ್ಥಿಗಳು ಕನ್ನಡ ಸಂಘದ ಆಶ್ರಯದಲ್ಲಿ ಡಾಕ್ಟರೇಟ್ ಪಡೆದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸಂಜೀವಶೆಟ್ಟಿಯವರನ್ನು ಇತ್ತೀಚೆಗೆ (17-12-1989) ರಂದು ಕಾಲೇಜಿನ ಸಭಾಗೃಹದಲ್ಲಿ ಅದ್ದೂರಿಯಿಂದ ಸನ್ಮಾನಿಸಿದರು.

ಡಾ. ಸಂಜೀವ ಶೆಟ್ಟಿಯವರು ಸೂಕ್ಷ್ಮ ವಿಚಾರದ ಆಳವಾದ ಅಧ್ಯಯನವುಳ್ಳ ಕವಿಗಳು ವಿಮರ್ಶಕರು. ಉತ್ತಮವಾದ ಸಂಶೋಧನಾ ಪ್ರಬಂಧವನ್ನು ರಚಿಸಿದವರು. ಎಂದು ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಆರ್.ಸಿ. ಹಿರೇಮಠ ಅವರು ಹೇಳಿದರು.

ಡಾ. ರಾ. ಯ. ಧಾರವಾಡಕರ ಅವರು ಕೆಲಸಗಳ ನಡುವೆಯೂ ಡಾ. ಶೆಟ್ಟಿಯವರು ಪಟ್ಟು ಹಿಡಿದು ಸಂಶೋಧನೆಯಲ್ಲಿ ತೊಡಗಿ ಡಾಕ್ಟರೇಟ್ ಪಡೆದುದು ಪ್ರಶಂಸನೀಯವಾಗಿದೆಯೆಂದರು.

ಡಾ. ಶೆಟ್ಟಿಯವರಿಗೆ ಶಾಲು ಹೊದಿಸಿ ಬೆಳ್ಳಿಯ ಗಣೇಶಮೂರ್ತಿ ನೀಡಿ ಫಲವಸ್ತುಗಳನ್ನಿತ್ತು ಸನ್ಮಾನಿಸಿದರು.

ವಿದ್ಯಾರ್ಥಿಗಳು ನೀಡಿದ ಸನ್ಮಾನಕ್ಕೆ ಉತ್ತರಿಸುತ್ತಾ ಡಾ. ಶೆಟ್ಟಿಯವರು ತನಗೆ ನೀಡಿದ ಸನ್ಮಾನ ಕನ್ನಡ ಸೇವೆಗೆ ಸಲ್ಲಿಸಿದ ಗೌರವವಾಗಿದೆ ಎಂದು ತುಂಬು ಹೃದಯದ ಕೃತಜ್ಞತೆ ಸಲ್ಲಿಸಿದರು.

- ಹರೀಶ ಕೆ. ಪೂಜಾರಿ

Edited, Printed & Published by M. A. N. Prasad on behalf of the Mysore Association Bombay
Printed at Tangson Printers, Udyambag - Belgaum - 590 008. Phone : 24188, 25888 (works)